ತಪ್ಪುಕಲ್ಪನೆ ಇರುವ ಕೆಲವೇ ಕೆಲವರು ಮನೆಯಿಂದ ನೀರು ತರುತ್ತಾರೆ' ಎನ್ನುತ್ತಾರೆ ಗುರುದೇವ್.

## ಬಳಕೆಗೆ ಮೂರು ಪಟ್ಟು ನೀರು ಲಭ್ಯ

ಇವರು 1,66,000 ಲೀಟರಿನ ಟಾಂಕಿಗಳಿಂದ ಇಡೀ ವರ್ಷ ಬಳಸುವ ಒಟ್ಟು ನೀರು ಅಷ್ಟೇ ಅಲ್ಲ! ಹಲವು ಪಟ್ಟು ಹೆಚ್ಚು. 'ಒಬ್ಬರಿಗೆ ಸರಾಸರಿ ದಿನಕ್ಕೊಂದು ಲೀಟರ್ ಅಂತ ಇಟ್ಟುಕೊಳ್ಳಿ', ಇವರು ವಿವರಿಸುತ್ತಾರೆ, '3,000 ಮಂದಿ 180 ದಿನ ಬಳಸುತ್ತಾರೆ ಎಂದರೆ, ಸುಮಾರು ಐದೂವರೆಯಿಂದ ಆರು ಲಕ್ಷ ಲೀಟರ್ ಸಿಗುತ್ತದೆ ಎಂದರ್ಥ.'

'ಶಾಲೆಯಲ್ಲಿ ಮಳೆಯ ದಾಖಲೆ ಇಟ್ಟುಕೊಳ್ಳುತ್ತಾರೆ. ಕಂಗಳೇ ಇವರ ಮಳೆಮಾಪಕ. ವರ್ಷಕ್ಕೆ 60ರಿಂದ 65 ಮಳೆಗಳು ಬಂದೇ ಬರುತ್ತವೆ. ಅದನ್ನು ವರ್ಗೀಕರಿಸಿ (ಬಾಕ್ಸ್ ಓದಿ) ಬರೆದಿಟ್ಟುಕೊಳ್ಳುತ್ತೇವೆ' ಎನ್ನುತ್ತಾರೆ. ವಿದ್ಯಾರ್ಥಿಗಳೇ ಬರೆದಿಟ್ಟ 12 ವರ್ಷಗಳ ಮಳೆದಾಖಲೆ ಇವರಲ್ಲಿದೆ.

2008ರಲ್ಲಿ ಭೇಟಿ ಕೊಟ್ಟಾಗ ಗುರುದೇವ್ ಹೇಳಿದ್ದರು, ''ವಾರಕ್ಕೆ ಕಾಲು–ಅರ್ಧ ಗಂಟೆಯಂತೆ ನಗರಸಭೆ ನೀರು ಕೊಟ್ಟದ್ದು 52 ದಿನ. ವರುಣ, ಅದಕ್ಕೂ ಹೆಚ್ಚು, ಅಂದರೆ, 63 ದಿನ ಕೊಟ್ಟುಬಿಟ್ಟ. ಆಗ ದೊಡ್ಡಬಳ್ಳಾಪುರದ ಜನಸಂಖ್ಯೆ ಒಂದು ಲಕ್ಷ. ಈಗ 1.25 ಲಕ್ಷ. ಆಗ 40–50 'ನೀರಿನ' ಟ್ರಾಕ್ಟರುಗಳು ಓಡಾಡುತ್ತಿದ್ದುವು. ಈಗ ನೀರಿನ ಟ್ರಾಕ್ಟರುಗಳು ನೂರಿನ್ನೂರು ಇವೆ! ಆಗ ನೀರಿನ ವಾರ್ಷಿಕ ವಹಿವಾಟು ಅಂದಾಜು 4 ಕೋಟಿ ರೂಪಾಯಿ. ಈಗ 10ರಿಂದ 15 ಕೋಟಿ ರೂಪಾಯಿ ಆಗಿರಬಹುದು!

1965ರ ಸುಮಾರಿಗೆ ಇಲ್ಲಿ ನೀರಿನ ಕೊರತೆ ಇರಲಿಲ್ಲ. 400–500 ಬಾವಿಗಳಿದ್ದು, ಸಿಹಿನೀರೂ ಇತ್ತು. ಅವನತಿ ಸುರುವಾದದ್ದು 70ರ ದಶಕದಿಂದ. ಹಲವು ಬಾವಿಗಳನ್ನು ಮುಚ್ಚಿಬಿಟ್ಟಿದ್ದಾರೆ. ಈಗ ಕೊಳವೆಬಾವಿಯ ಆಳ 1000 ಅಡಿಗಿಂತ ಕಡಮೆಯೇ ಇಲ್ಲ. 1400 ಅಡಿವರೆಗೂ ಹೋದದ್ದಿದೆ.

## ಕುಂಟೆಗಳು ಸಮೃದ್ಧವಾಗಿದ್ದಾಗ...

ಗುರುದೇವರ ಮನದಲ್ಲಿ ಅರ್ಧ ಶತಮಾನ ಹಿಂದಿನ ಕುಂಟೆಗಳ ಸುಂದರ ಚಿತ್ರವಿದೆ. ''ನಮ್ಮ ಮನೆಯಿಂದ ಅರ್ಧ ಕಿಲೋಮೀಟರಿನೊಳಗೆ ಐದು ಕುಂಟೆಗಳಿದ್ದುವು. ಕದಿರಪ್ಪನ ಕುಂಟೆ, ಬಸವಣ್ಣ ದೇವಸ್ಥಾನದ ಕುಂಟೆ, ಕೆಂಕ್ರೆಯವರ ಕುಂಟೆ, ಬೆಗಳಿ ಗಾರ್ಡನ್ಸ್ ಕುಂಟೆ ಮತ್ತು ದರ್ಗಾ ಕುಂಟೆ. ಇಳಿಜಾರಿಗೆ ಅಡ್ಡ ಕಟ್ಟೆ ಕಟ್ಟಿದರೆ ಅದುವೇ ಕುಂಟೆ. ಸುಮಾರು 200–300 ಅಡಿ ಅಗಲ, 10–12 ಅಡಿ ಆಳ. ದನಕರುಗಳು ಅಲ್ಲೇ ಬಂದು ನೀರು ಕುಡಿಯುತ್ತಿದ್ದುವು. ನಾವೆಲ್ಲಾ ಈಜು ಕಲಿತದ್ದೇ ಈ ಕುಂಟೆಗಳಲ್ಲಿ. ಆಗ ನೀರಿನ ಸಂಕಟವೂ ಇರಲಿಲ್ಲ. ಈಗ ಐವತ್ತು ವರ್ಷದ ಕೆಳಗಿನವರಿಗೆ ಈ ಕುಂಟೆಗಳ ಹೆಸರೇ ಗೊತ್ತಿಲ್ಲ. ಅವೆಲ್ಲವೂ ಹಾಳಬಿದ್ದಿವೆ. ಕಟ್ಟಡಗಳೆದ್ದು ಮಾಯವಾಗಿವೆ.''



ವಿವೇಕಾನಂದ ಕನ್ನಡ ಮಾಧ್ಯಮ ಶಾಲೆ ಅಡುಗೆಗೂ ಮಳೆನೀರು ಬಳಕೆ

ದಶಕದ ಹಿಂದೆ ದೊಡ್ಡಬಳ್ಳಾಪುರದಲ್ಲಿ 44 ಶಾಲೆಗಳಿದ್ದುವು. 12 ಸಾವಿರ ವಿದ್ಯಾರ್ಥಿಗಳು. ಎಲ್ಲಾ ಶಾಲೆಗಳೂ ಸೇರಿ ನೀರಿಗೇ ಕನಿಷ್ಠ 4.5 ಲಕ್ಷ ರೂ. ವ್ಯಯಿಸುತ್ತಿದ್ದುವು. ಈಗ ಶಾಲೆಗಳ ಸಂಖ್ಯೆ 65ಕ್ಕೇರಿದೆ. ವಿದ್ಯಾರ್ಥಿ ಸಂಖ್ಯೆ 19 ಸಾವಿರ. ಮಳೆಕೊಯ್ಲಿನ ಕಾನೂನಿನ್ವಯ ಈ ಶಾಲೆಗಳು ಏನೋ ಅಲ್ಪಸ್ವಲ್ಪ ವ್ಯವಸ್ಥೆ ಮಾಡಿಕೊಂಡಿವೆ. ಆದರೆ ಸುಸಜ್ಜಿತ ಮಳೆಕೊಯ್ಲು ಮಾಡಿರುವ ಶಾಲೆಗಳು ಬೆರಳೆಣಿಕೆಯವು ಮಾತ್ರ.

''2002ರಿಂದ 2005ರವರೆಗೆ, ಭೀಕರ ಬರಗಾಲ ಬಂದಿದ್ದಾಗ ಸ್ವಲ್ಪ ನೀರೆಚ್ಚರ ಮೂಡಿತ್ತು. ಮತ್ತೆ ಅದು ಮರೆಯಾಯಿತು. ಇಲ್ಲಿ ಕಾಂಚಾಣದ ಹಿಂದೆ ಓಡುವವರೇ ಹೆಚ್ಚು. ನೀರನ್ನು ಎಚ್ಚರದಿಂದ ಬಳಸಬೇಕು, ಉಳಿಸಿಕೊಳ್ಳಬೇಕು ಎಂಬ ಪ್ರಜ್ಞೆ ತೀರಾ ಕಮ್ಮಿ'' ಎಂದು ವಿಷಾದಿಸುತ್ತಾರೆ ಸಾಮಾಜಿಕ ಕಾರ್ಯಕರ್ತ ಸುಂ.ಸು. ಬದರೀನಾಥ್. ಮಧ್ಯಮ ವರ್ಗದ ಕುಟುಂಬಗಳು ಬೇಸಿಗೆಯಲ್ಲಿ ತಿಂಗಳಿಗೆ ಸಾವಿರ ರೂ ನೀರಿಗೇ ವ್ಯಯಿಸುವ ಸ್ಥಿತಿ ಇಲ್ಲಿನದು.

ಬೇಸರದಿಂದ ನುಡಿಯುತ್ತಾರೆ ಗುರುದೇವ್, ''ಈಚೆಗೆ ದೂರದಿಂದ ಎರಡು ತಂಡಗಳು ನಮ್ಮ ಮಳೆಕೊಯ್ಲು ನೋಡಲು ಬಂದಿದ್ದವು. ಇದು ಬಿಟ್ಟರೆ ಬೇರೆ ಯಾರೂ ಬಂದೇ ಇಲ್ಲ.''

## ನಿಧಾನಗತಿಯ ಒಲವು

ಆದರೂ ಹೆಬ್ಬಂಡೆ ನಿಧಾನವಾಗಿ ಚಲಿಸತೊಡಗಿದೆ. ಮೊದಮೊದಲು ಮಳೆನೀರು ಸಂಗ್ರಹದ ಬಗ್ಗೆ ಹೇಳಿದರೆ, 'ಅದಕ್ಕೆ ಆಗಾಗ ಕ್ಲೀನ್ ಮಾಡಬೇಕಂತಲ್ವಾ, ಪೈಪ್‌ಲೈನ್ ಹಾಕಬೇಕಂತೆ' ಅಂತೆಲ್ಲಾ ರಾಗ ಎಳೆಯುತ್ತಿದ್ದರು. ಈಗ 'ಹೊಸ ಮನೆ ಕಟ್ಟಿಸುತ್ತಿದ್ದೇವೆ, ಹೇಗೆ ಮಳೆ ಹಿಡಿಯಬಹುದು ಅಂತ ನೋಡಿ ಹೇಳ್ತೀರಾ' ಎಂದು ಕೇಳಿ ಬರುವವರಿದ್ದಾರೆ ಎನ್ನುತ್ತಾರೆ ವಿವೇಕಾನಂದ ಶಾಲೆಯ ಮ್ಯಾನೇಜರ್ ಆರ್. ಲಕ್ಷ್ಮೀನಾರಾಯಣ. ಇವರು ಮತ್ತು ಸಹಾಯಕ ಮ್ಯಾನೇಜರ್ ಟಿ.ವಿ. ರವಿ ಹಲವು ಮನೆಗಳಿಗೆ ಭೇಟಿ ಕೊಟ್ಟು

## ಸೋರಿಹೋದ 80 ಕೋಟಿ

'ಎಸ್.ಎಂ. ಕೃಷ್ಣ ಮುಖ್ಯಮಂತ್ರಿಯಾಗಿದ್ದಾಗ (1999–2004) ರಾಜ್ಯದ 26,502 ಶಾಲೆಗಳಲ್ಲಿ ಮಳೆನೀರು ಸಂಗ್ರಹದ ಕೆಲಸ ಮಾಡಿಸಿದ್ದರು. ಇದಕ್ಕೆ 80 ಕೋಟಿ ರೂಪಾಯಿ ವೆಚ್ಚವಾಗಿತ್ತು' ಎಂದು ಡಾ. ದೇವರಾಜ್ ರೆಡ್ಡಿ ನೆನಪಿಸಿಕೊಳ್ಳುತ್ತಾರೆ, 'ದುರದೃಷ್ಟವಶಾತ್ ಇದರಲ್ಲಿ ಹೆಚ್ಚಿನವೂ ಕೆಲಸವೇ ಮಾಡುತ್ತಿಲ್ಲ.'

2007ರಲ್ಲಿ 'ಅರ್ಘ್ಯಂ' ಸಂಸ್ಥೆ ಈ ಶಾಲೆಗಳ ಮಳೆಕೊಯ್ಲಿನ ಸಮೀಕ್ಷೆ ನಡೆಸಿತು. ಈ ತಂಡದ ಒಬ್ಬ ಸದಸ್ಯರಾಗಿ ದೇವರಾಜ್ ಎರಡು ಜಿಲ್ಲೆಯಲ್ಲಿ ವ್ಯಾಪಕ ಪ್ರವಾಸ ಮಾಡಿದ್ದರು.

'ಹಲವೆಡೆ ಕಳಪೆ ಕಾಮಗಾರಿ, ಸ್ಥಳೀಯರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೆ ಮಾಡಿದ ರಚನೆಗಳು – ಉದಾಹರಣೆಗೆ ಬಾವಿಕೇಂದ್ರಿತ ಕೆಲಸ ಮಾಡಬೇಕಿದ್ದ ದ.ಕ. ಜಿಲ್ಲೆಯಲ್ಲೂ ಮಳೆನೀರ ಸಂಗ್ರಹ ಹೇರಿದುದು – ಯೋಜನೆ ಈ ಥರದ ಸೋಲು ಕಾಣಲು ಕಾರಣ' ಎನ್ನುತ್ತಾರೆ ಇವರು.

ಈ ಮಳೆಕೊಯ್ಲು ವ್ಯವಸ್ಥೆಗಳನ್ನು ಪುನರುಜ್ಜೀವನ ಮಾಡುವ ಪ್ರಸ್ತಾವ 'ಅರ್ಘ್ಯಂ'ನ ಎದುರಿತ್ತು. ಆದರದು ಕಾರ್ಯಸಾಧ್ಯವಲ್ಲ ಎಂದು ಮನದಟ್ಟಾಯಿತು. 'ಅರ್ಘ್ಯಂ' ಶಾಲೆಗಳಲ್ಲಿ ಕೆಲವು ಮಳೆಕೊಯ್ಲಿನ ಮಾದರಿ ಕೆಲಸಗಳಿಗೆ ಮುಂದಾಗಲು ಪ್ರೇರಣೆ ಸರಕಾರಿ ಕೆಲಸಗಳ ದುರವಸ್ಥೆಯೇ ಎಂದು ರೆಡ್ಡಿ ವಿಶ್ಲೇಷಿಸುತ್ತಾರೆ.